ರತನ್ ಟಾಟಾರಿಗೆ ದೈವತ್ವವನ್ನು ದೇಶದ ಜನತೆ ಕೊಡುತ್ತಿರುವುದಕ್ಕೆ ಕಾರಣಗಳಿವೆ. ವ್ಯಾಪಾರದ ಸಂಕುಚಿತ ಪ್ರಪಂಚದಾಚೆಗೆ ರತನ್ ಟಾಟಾ ಸಜ್ಜನರೂ ದಯಾಳುವೂ ಆಗಿದ್ದರು. ಸಂಕುಚಿತ ಭಾವವನ್ನು ಪ್ರದರ್ಶಿಸುವ, ಶಿಷ್ಟಾಚಾರವನ್ನು ಮೀರುವ ಯಾವುದೇ ಕೆಲಸವನ್ನು ಅವರು ಮಾಡಿಲ್ಲ. ಇಲ್ಲಿ ಟಾಟಾ ಸಮೂಹದ ಮೌಲ್ಯಗಳೂ ಮತ್ತು ರತನ್ ಟಾಟಾರ ವ್ಯಕ್ತಿತ್ವ ಎರಡೂ ಮೇಳೈಸಿದ್ದುವು.

ಟಾಟಾ ಸಮೂಹದ ಮೌಲ್ಯಗಳನ್ನು ಮೂಲದಲ್ಲಿ ಪ್ರತಿಪಾದಿಸಿದ್ದು ಜೆಮ್‌ಶೆಟ್‌ಜಿ ಟಾಟಾ. ಅವರು ಸ್ಥಾಪಿಸಿದ 'ಎಂಪ್ರೆಸ್ ಮಿಲ್ಸ್' ಆರ್ಥಿಕವಾಗಿ ಯಶಸ್ವಿಯಾಗಿತ್ತು. ಆ ಉದ್ಯಮದಲ್ಲಿ ಉದ್ಯೋಗಿಗಳ ಕ್ಷೇಮಾಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಿ ಆ ದಿನಗಳಲ್ಲಿಯೇ ಅವರು ಶುಲ್ಕರಹಿತ ಆರೋಗ್ಯ ಸೇವೆ, ಗ್ರಾಚ್ಯುಟಿ ಮತ್ತು ಮಹಿಳೆಯರಿಗೆ ಮಾತೃತ್ವ ಭತ್ಯೆಯನ್ನು ಕೊಡುತ್ತಿದ್ದರು. ಅವರು ಸಂಪಾದಿಸಿದ ಲಾಭವನ್ನು ವಿದ್ಯಾಕ್ಷೇತ್ರದಲ್ಲಿ ತೊಡಗಿಸಿದರು. ಜೆಮ್‌ಶೆಟ್‌ಜಿ ಟಾಟಾರ ಪರಂಪರೆಯನ್ನು ಅವರ ಮಕ್ಕಳಾದ ಸರ್ ರತನ್ ಟಾಟಾ (ಈಚೆಗೆ ತೀರಿಕೊಂಡ ರತನ್ ಟಾಟಾರ ಅಜ್ಜ) ಮತ್ತು ಸರ್ ದೊರಾಬ್ಜಿ ಟಾಟಾ ಮುಂದುವರೆಸಿದ್ದಲ್ಲದೇ, ಟಾಟಾ ಸಮೂಹದಲ್ಲಿದ್ದ ತಮ್ಮ ಮಾಲೀಕತ್ವವನ್ನು ಎರಡು ಪ್ರಮುಖ ದತ್ತಿನಿಧಿಗಳಿಗೆ ಬರೆದುಕೊಟ್ಟರು. ಹೀಗೆ ಟಾಟಾ ಸಮೂಹದ ಮಾತೃ ಸಂಸ್ಥೆಯಾದ ಟಾಟಾ ಸನ್ಸ್‌ನ ಶೇಕಡ 60ಕ್ಕಿಂತ ಹೆಚ್ಚಿನ ಮಾಲೀಕತ್ವ ಸುಮಾರು 6 ಭಿನ್ನ ದತ್ತಿನಿಧಿಗಳಲ್ಲಿವೆ. ಈ ದತ್ತಿನಿಧಿಗಳು ಟಾಟಾ ಸಂಸ್ಥೆಗಳು ಕೊಡುವ ಲಾಭಾಂಶವನ್ನು ಅಭಿವೃದ್ಧಿ ಮತ್ತು ವಿಕಾಸದ ಕೆಲಸಗಳಲ್ಲಿ ತೊಡಗಿಸುತ್ತವೆ.

ಮಹಾತ್ಮಾ ಗಾಂಧಿಯವರು ಭಾರತಕ್ಕೆ ಹಿಂದಿರುವುದಕ್ಕೆ ಮುನ್ನ ದಕ್ಷಿಣ ಆಫ್ರಿಕಾದಲ್ಲಿನ ಅವರ ಹೋರಾಟಕ್ಕೆ ಹೆಚ್ಚಿನ ಧನಸಹಾಯವನ್ನು ಸರ್ ರತನ್ ಟಾಟಾ ಮಾಡಿದ್ದರು. 1892ರಲ್ಲಿ ಜೆಮ್‌ಶೆಟ್‌ಜಿ ಟಾಟಾ ಭಾರತದ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆಂದೇ ಸ್ಥಾಪಿಸಿದ ದತ್ತಿಯಿಂದ ವಿದ್ಯಾರ್ಥಿವೇತನ ಪಡೆದವರಲ್ಲಿ ಕನ್ನಡದ ಗಿರೀಶ ಕಾರ್ನಾಡರೂ ಒಬ್ಬರು. ರತನ್ ಟಾಟಾರ ನೈತಿಕ ನಿಲುವುಗಳು ಹೀಗೆ ಟಾಟಾ ಸಮೂಹದ ಮೌಲ್ಯಗಳಿಂದ ಬಳುವಳಿ ಪಡೆದವಾಗಿದ್ದುವು. ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್' (ಇದನ್ನು ಹಿಂದೆ ಎಲ್ಲರೂ 'ಟಾಟಾ ಇನ್‌ಸ್ಟಿಟ್ಯೂಟ್' ಎಂದೇ ಕರೆಯುತ್ತಿದ್ದರು) ಟಾಟಾ ಸಮೂಹ, ಭಾರತ ಸರ್ಕಾರ ಮತ್ತು ಮೈಸೂರು ಸರ್ಕಾರಗಳ ಸಹಭಾಗಿತ್ವದಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಗೆ ಟಾಟಾ ಸಮೂಹ ಈಗಲೂ ಅವಶ್ಯ ಬಿದ್ದಾಗ ಧನಸಹಾಯವನ್ನು ಮಾಡುತ್ತಾ ಬಂದಿದೆ.

ಟಾಟಾ ಮೌಲ್ಯಗಳಲ್ಲಿ ವ್ಯಾಪಾರ, ಮತ್ತು ಲಾಭಾರ್ಜನೆ ಒಂದು ಭಾಗದಲ್ಲಿದ್ದರೆ – ಆರ್ಜಿಸಿದ ಲಾಭವನ್ನು ಖರ್ಚು ಮಾಡುವ ಪರಿ ಮತ್ತೊಂದು ಭಾಗದಲ್ಲಿದೆ. ಹೀಗಾಗಿಯೇ ನಮಗೆ ಟಾಟಾ ಹೆಸರಿನಲ್ಲಿ ಎಷ್ಟು ವ್ಯಾಪಾರಗಳು ಕಾಣಿಸುತ್ತವೋ ಅಷ್ಟೇ ಮಟ್ಟದಲ್ಲಿ ಸಾಮಾಜಿಕ ಸಂಸ್ಥೆಗಳೂ ಕಾಣಿಸುತ್ತವೆ. ಟಾಟಾ ಕ್ಯಾನ್ಸರ್ ಆಸ್ಪತ್ರೆ, ಟಾಟಾ ಮೌಲಿಕ ವಿಜ್ಞಾನ ಸಂಸ್ಥೆ, ಟಾಟಾ ಸಮಾಜ ವಿಜ್ಞಾನ ಸಂಸ್ಥೆ – ಹೀಗೆ ಉದಾಹರಣೆಗಳು ಅನೇಕ. ರಾಜಕೀಯ ಪಕ್ಷಗಳಿಗೆ ಚಂದಾ ಕೊಡುವುದಕ್ಕೂ ಟಾಟಾ ಸಮೂಹ ಒಂದು ಹೊಸ ಏರ್ಪಾಟನ್ನು ಮಾಡಿತ್ತು. ಸಮೂಹ ಸಂಸ್ಥೆಗಳಿಂದ ಮತ್ತು ಇತರ ವ್ಯಾಪಾರಿಗಳಿಂದ ಪಡೆದ ದೇಣಿಗೆಯನ್ನು ಕಂಪನಿಯಿಂದ ದೂರ – 'ಪ್ರೊಗ್ರೆಸಿವ್ ಎಲೆಕ್ಟರಲ್ ಟ್ರಸ್ಟ್' ಎನ್ನುವ ದತ್ತಿಯಲ್ಲಿ ಹೂಡಿ, ಆ ದತ್ತಿ ರಾಜಕೀಯ ಪಕ್ಷಗಳಿಗೆ ಒಂದು ಸೂತ್ರಾನುಸಾರ ಧನಸಹಾಯ ಮಾಡುವ ಏರ್ಪಾಟು ರೂಪಿಸಿತ್ತು. ಇದು ಚುನಾವಣಾ ಬಾಂಡುಗಳಿಗಿಂತ ಉತ್ತಮ ಹಾಗೂ ಪಾರದರ್ಶಕವಾದ ಏರ್ಪಾಟಾಗಿತ್ತು.

ನೈತಿಕತೆ ಮತ್ತು ಸಾಮಾಜಿಕ ಜವಾಬ್ದಾರಿಯಿಂದ ವ್ಯಾಪಾರದಲ್ಲಿ ತೊಡಗಿಕೊಳ್ಳುವುದು ಮತ್ತು ವ್ಯಾಪಾರದಿಂದ ಆರ್ಜಿತವಾದ ಲಾಭದ ಹೆಚ್ಚಿನ ಭಾಗವನ್ನು ಮತ್ತು ಸಮಾಜಕ್ಕೆ ಅವಶ್ಯವಾದ ಚಟುವಟಿಕೆಗಳಲ್ಲಿ ತೊಡಗಿಸುವುದು ಟಾಟಾ ಸಮೂಹದ ಮೌಲ್ಯವೆಂದು ಹೇಳಬಹುದು. ಈ ಮೌಲ್ಯಗಳನ್ನು ಜೆಆರ್‌ಡಿ ಟಾಟಾ ಸಶಕ್ತವಾಗಿ ನಿಭಾಯಿಸಿದರು. ರತನ್ ಟಾಟಾ ಅದನ್ನು ಮುಂದುವರೆಸಿದರು. ಮಹಾತ್ಮಾ ಗಾಂಧಿಯವರು ವ್ಯಕ್ತಪಡಿಸಿದ್ದ ಟ್ರಸ್ಟೀಶಿಪ್ ಮಾದರಿಗೆ ಇದು ಅತ್ಯಂತ ಹತ್ತಿರದಲ್ಲಿದ್ದ ಏರ್ಪಾಟಾಗಿತ್ತು.

ಈ ನೈತಿಕತೆ ನಮಗೆ ಬಿಕ್ಕಟ್ಟಿನ ಕಾಲದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. 'ನ್ಯಾನೋ' ಕಾರಿನ



